# ಪ್ರಥಮ ದರ್ಜೇ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಶಹಾಬಾದ

**CC.No. 236/2023**

**CW : 03 PW: 03**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 17.03.2026**

| | |
|---|---|
| ಹೆಸರು | : ಮೋಹನ ಪವಾರ |
| ತಂದೆಯ ಹೆಸರು | : ಯೋಗಿ |
| ವಯಸ್ಸು | : 47 |
| ಉದ್ಯೋಗ | : ಒಕ್ಕಲುತನ |
| ವಾಸಸ್ಥಳ | : ಥರಿ ತಾಂಡ |

ನನಗೆ ಚಾಸಾ-1, 2 ಮತ್ತು 9 ರವರ ಪರಿಚಯ ಇರುವುದಿಲ್ಲ. ಈ ಹಂತದಲ್ಲಿ ಸಾಕ್ಷಿದಾರರಿಗೆ ಕಡತದಲ್ಲಿರುವ ದಾಖಲೆಯನ್ನು ತೋರಿಸಿದ್ದು ಅದು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.4 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.4 (ಎ) ಎಂದು ನಿಶಾನೆಗೊಳಿಸಲಾಯಿತು.

ಯಾವ ಕಾರಣಕ್ಕಾಗಿ ನಾನು ನಿ.ಪಿ.4 ರ ಮೇಲೆ ಸಹಿ ಹಾಕಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ಪೋಲೀಸರು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ನಿ.ಪಿ.4 ರಂತೆ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ಪಂಚನಾಮೆ ಯಾವ ದಿನಾಂಕ, ಸಮಯದಲ್ಲಿ ಆಗಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

ಈ ಪ್ರಕರಣದಲ್ಲಿ ಒಂದು ಭಾವಚಿತ್ರವನ್ನು ತೆಗೆದಿದ್ದು, ಸದರಿ ಭಾವಚಿತ್ರವನ್ನು ಈಗಾಗಲೇ ನಿ.ಪಿ.2 ಎಂದು ನಿಶಾನೆಗೊಳಿಸಲಾಗಿದ್ದು, ಅದನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ. ನಿ.ಪಿ.2 ರಂತೆ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

**(ಈ ಹಂತದಲ್ಲಿ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>**

ದಿ: 26/01/2023 ರಂದು ಮಧ್ಯಾಹ್ನ 3.30 ರಿಂದ 4.30 ರವರೆಗೆ ಚಾಸಾ-1 ಇವರು ತೋರಿಸಿರುವ ಅವರ ಮನೆಯ ಮುಂದೆ ಚಾಸಾ-9 ರವರು ನನ್ನ ಮತ್ತು ಚಾಸಾ-2 ರವರ ಸಮಕ್ಷಮ ನಿ.ಪಿ.4 ರಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.2 ಮತ್ತು 4 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆ ಸಮಯದಲ್ಲಿ ನಿ.ಪಿ.2 ರಂತೆ ಭಾವಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**Sd/-**
**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**